## ಈ ಧೋರಣೆ ನಿಮಗೆ 'ಲಕ್ಷಣ'ವೇ ಸ್ವಾಮಿ...

ಕಲರ್ಸ್ ಕನ್ನಡದ 'ಲಕ್ಷಣ' ಧಾರಾವಾಹಿಯಲ್ಲಿ ಲಕ್ಷಣ ತನ್ನ ಅತ್ತೆ ಶಕುಂತಲಾದೇವಿಯನ್ನು, 'ಬಟ್ಟೆ ಒಗೆಯಲು ಹಾಕಬೇಕು. ನಿಮ್ಮ ಬಟ್ಟೆಗಳನ್ನೂ ಕೊಡಿ' ಎಂದು ಕೇಳುತ್ತಾಳೆ. ಆಗ ಶಕುಂತಲಾದೇವಿ, ವಾರ್ಡ್‌ರೋಬಿನಲ್ಲಿ ಇಸ್ತ್ರಿ ಮಾಡಿ ಇಟ್ಟಿದ್ದ ಸೀರೆಗಳನ್ನು ಒಗೆಯಲು ಲಕ್ಷಣ ಕೈಗೆ ಕೊಡುತ್ತಾಳೆ. ಇದು ಆಕೆಯ ದಡ್ಡತನವೋ ಅಥವಾ ನಾವು ಪ್ರೇಕ್ಷಕರು ಏನೇ ತೋರಿಸಿದರೂ ನೋಡುತ್ತೇವೆ ಎಂದು ನಿರ್ದೇಶಕರು ತಿಳಿದುಕೊಂಡಿದ್ದಾರೋ?

—ಸಿ.ಆರ್. ಶ್ರೀನಿವಾಸ, ಬೆಂಗಳೂರು

## ರಿಯಾಲಿಟಿ ಶೋಗಳು ಎಳೆಯರಿಗೆ ಹೊರೆ

ಮಕ್ಕಳು, ಯುವಕರು, ಪುರುಷರು, ಮಹಿಳೆಯರು ಹೀಗೆ ನಾನಾ ವಯೋಮಾನದವರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ರಿಯಾಲಿಟಿ ಶೋಗಳನ್ನು ರೂಪಿಸುತ್ತಾರೆ. ಆದರೆ ವಿಷಯ, ವಸ್ತು ನಿರೂಪಣೆಯಲ್ಲಿ ಏಕರೂಪತೆಯೇ ಇರುತ್ತದೆ. ಉದಾಹರಣೆಗೆ, ಮಕ್ಕಳನ್ನೇ ಕೇಂದ್ರೀಕರಿಸಿದ ಕಾರ್ಯಕ್ರಮದಲ್ಲಿ ಮುಗ್ಧ ಎಳೆಯರನ್ನು ಸಂಸಾರಸ್ಥರನ್ನಾಗಿ ರೂಪಿಸುವುದು ಸರಿಯಲ್ಲ. ಅವರ ವಯೋಮಾನಕ್ಕೆ ಪೂರಕವಲ್ಲದ ಪಾತ್ರಗಳನ್ನು ಮಕ್ಕಳು ನಿರ್ವಹಿಸುವುದೂ ಸರಿಯಲ್ಲ. ವಿದ್ಯಾಭ್ಯಾಸ ಪೂರೈಸಿದ ತದನಂತರ ದೊಡ್ಡವರಾದ ಮೇಲೆ ಅವರಿಗೆ ಆಸಕ್ತಿ ಇದ್ದರೆ ಅದಕ್ಕೆ ಅವಕಾಶ ಇದ್ದೇ ಇರುತ್ತದೆ.

ಮಕ್ಕಳ ಓದಿಗೆ ಮಹತ್ವ ಕೊಡುವುದು ಪ್ರತಿಯೊಬ್ಬರ ಕರ್ತವ್ಯ. ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ವಿದ್ಯಾಭ್ಯಾಸವೇ ಎಳೆಯರಿಗೆ ಹೊರೆ ಆಗಿರುವಾಗ ರಿಯಾಲಿಟಿ ಶೋಗಳಿಗೆ ನಿರ್ಬಂಧ ವಿಧಿಸುವುದು ಸೂಕ್ತ.

—ಪೂರ್ಣಿಮಾ ಮೂರ್ತಿ, ಬೆಂಗಳೂರು

## 'ನನ್ನಮ್ಮ...' ಎನ್ನುವ ದೊಡ್ಡವರ ಶೋ

'ಕಲರ್ಸ್ ಕನ್ನಡ' ವಾಹಿನಿಯಲ್ಲಿ ಮಹಾಸಂಗಮ ಎನ್ನುವ ಹೆಸರಲ್ಲಿ 'ರಾಜ ರಾಣಿ', 'ಗಿಚ್ಚಿ ಗಿಲಿಗಿಲಿ' ತಂಡಗಳಿಂದ ಕಲಾವಿದರನ್ನು ಮಕ್ಕಳ ಶೋಗೆ ಕರೆಸುವುದು, ದ್ವಂದ್ವಾರ್ಥದ ಮಾತನಾಡುವುದು, ರೊಮ್ಯಾನ್ಸ್ ಮಾಡುವ ಕಸರತ್ತುಗಳು ತೀರ್ಪುಗಾರರಾದ ಸೃಜನ್ ಲೋಕೇಶ್, ತಾರಾ, ಅನುಪ್ರಭಾಕರ್ ನೋಡಿ ನಗುವುದು ಏನನ್ನು ತೋರಿಸುತ್ತದೆ?

ದ್ವಂದ್ವಾರ್ಥದ ಜೋಕ್‌ಗಳನ್ನು ಮಕ್ಕಳ ಮುಂದೆ ಪ್ರದರ್ಶಿಸುವುದು, ಚಿಕ್ಕ ಮಕ್ಕಳು ಸರಸ ಸಲ್ಲಾಪದ ಹಾಡಿಗೆ ಕುಣಿಯುವುದು... ಇಂಥದ್ದನ್ನು ನಾವು ಮಕ್ಕಳಿಗೆ ಕಲಿಸಬೇಕಾ? ಇಂಥದ್ದನ್ನು 'ಮಕ್ಕಳ ಶೋ' ಎಂದು ಮಕ್ಕಳಿಗೆ ತೋರಿಸುವುದಾದರೂ ಹೇಗೆ?

—ಚಿನ್ಮಯಿ ಮಹಂತ್, ಶಿವಮೊಗ್ಗ

ವಾರದ ಪತ್ರ

## 'ಜೀ ಹುಜೂರ್' ಸಂಸ್ಕೃತಿ ನಮಗೆ ಬೇಕೆ?

ವಾಹಿನಿಗಳಲ್ಲಿ ಅಪ್ಪಟ ಕನ್ನಡ ಮಾಯವಾಗುತ್ತಿದೆ. ಇಂಗ್ಲಿಷ್ ಪದ ಬಳಕೆ ಮಿತಿ ಮೀರಿದೆ. ಕಾರ್ಯಕ್ರಮಗಳ ಹೆಸರಿನಲ್ಲಿಯೇ ಒಂದೆರಡು ಪದ ಅನ್ಯ ಭಾಷೆಗೆ ಸೇರಿರುತ್ತವೆ. ಇತ್ತೀಚೆಗೆ ಹಿಂದಿ ಪದಗಳ ಬಳಕೆಯೂ ಹೆಚ್ಚಾಗುತ್ತಿದೆ.

ವಾರಾಂತ್ಯದ 'ಲೈವ್ ಶೋ'ಗಳಲ್ಲಿ ನಿರೂಪಕ/ನಿರೂಪಕಿ 'ವೀಕ್ ಎಂಡ್ ಗ್ರಾಂಡ್ ಫಿನಾಲೆಗೆ ಹಾಯ್' ಎಂದೇ ದೊಡ್ಡ ದನಿಯಲ್ಲಿ ಕೂಗುತ್ತಾರೆ. 'ಝೀ ಕನ್ನಡ'ದಲ್ಲಿ ನಮ್ಮ ನಿಮ್ಮೆಲ್ಲರ ಹೆಮ್ಮೆಯ ಅರ್ಜುನ್ ಜನ್ಯಾಜೀ, ವಿಜಯ ಪ್ರಕಾಶ್ ಜೀ, ಹಂಸಲೇಖ ಜೀ , ರವಿಚಂದ್ರನ್ ಜೀ... ಅವರನ್ನು 'ಗ್ರಾಂಡ್ ಆಗಿ ವೆಲ್ ಕಂ' ಮಾಡೋಣ ಎಂದು ಹೇಳುತ್ತಾರೆ. ನಿರೂಪಕರ ದನಿಯನ್ನೇ ಅನುಕರಿಸಿ ಬಹುತೇಕರು 'ಜೀ' ಎಂದೇ ಸಂಬೋದಿಸುತ್ತಾರೆ. ಇದು ಕನ್ನಡ ಸಂಸ್ಕೃತಿಗೆ ಹೊಂದಿಕೆ ಆಗುವುದಿಲ್ಲ. ಅದರ ಬದಲು ಮಾನ್ಯ, ಗೌರವಾನ್ವಿತ ಪದಗಳನ್ನು ಬಳಸಬಹುದು. ಏಕೆ ಹಿಂದಿಗೆ ಜೀ ಹುಜೂರ್ ಎನ್ನಬೇಕು.

—ಆರ್. ವೀರೇಶ್ ಕುಮಾರ್, ಬೆಂಗಳೂರು



## ಶೀರ್ಷಿಕೆ ಸೊಗಸು, ಹೂರಣ ಅದೇ ಅದೇ...

ಸ್ಟಾರ್ ಸುವರ್ಣದ 'ಕಥೆಯೊಂದು ಶುರುವಾಗಿದೆ' ಧಾರಾವಾಹಿಯಲ್ಲಿ ನಾಯಕ ಮೊದಲ ನೋಟದಲ್ಲಿಯೇ ನಾಯಕಿಯಲ್ಲಿ ಅನುರಕ್ತ ಆಗುತ್ತಾನೆ. ಮದುವೆ ಆದರೆ ಇವಳನ್ನೇ ಎಂದೂ ನಿಶ್ಚಯಿಸುತ್ತಾನೆ. ಆದರೆ, ಹುಡುಗಿಯ ತಾಯಿಗೆ ತನ್ನ ಮೂವರು ಹೆಣ್ಣುಮಕ್ಕಳಿಗೂ ಶ್ರೀಮಂತ ವರಗಳನ್ನೇ ಹುಡುಕುವ ಆಸೆ. ಅದಕ್ಕಾಗಿ ಭಿಕ್ಷೆ ಬೇಡಲೂ ಸಿದ್ಧ ಎನ್ನುತ್ತಾಳೆ. ತನಗೆ ಒಬ್ಬಳೇ ಮಗಳು ಎಂದು ಸುಳ್ಳು ಹೇಳುತ್ತಾಳೆ. ಇದೆಲ್ಲ ನೋಡಿದರೆ, ಧಾರಾವಾಹಿ ಹೆಸರಿನಲ್ಲಿರುವ ಗಾಂಭೀರ್ಯ ಕಥೆಯಲ್ಲಿ ಇಲ್ಲ ಎನಿಸುತ್ತದೆ.

—ಶರ್ಮಿಷ್ಠಾ, ವೇದಗರ್ಭ

## ಕನ್ನಡಾಭಿಮಾನಿ ಹರ್ಷನಿಗೆ ಮೆಚ್ಚುಗೆಯ ಚಪ್ಪಾಳೆ

'ಕಲರ್ಸ್ ಕನ್ನಡ' ವಾಹಿನಿಯ 'ಕನ್ನಡತಿ'ಗೂ ಕನ್ನಡಕ್ಕೂ ಎತ್ತಣ ಸಂಬಂಧ ಎಂದು ಟೀಕಿಸಿದವರಿಗೆ ಉತ್ತರ ದೊರೆತಿದೆ. ಕಟ್ಟಾ ಕನ್ನಡಾಭಿಮಾನಿ ಭುವಿಯ ಮೇಲಿನ ಪ್ರೀತಿಗೋ ಅಥವಾ ಕನ್ನಡದ ಬಗೆಗೆ ಜಾಗೃತವಾದ ಅಸ್ಮಿತೆ, ಸ್ವಾಭಿಮಾನದ ಪ್ರತೀಕವೋ, ಕನ್ನಡದ ಬಗೆಗೆ ನಿಕೃಷ್ಟಭಾವನೆ ಹೊಂದಿದ್ದ ಹರ್ಷ ಈಗ ಪಕ್ಕಾ ಕನ್ನಡಾಭಿಮಾನಿಯಾಗಿ ಪರಿವರ್ತಿತನಾಗಿದ್ದಾನೆ. ತಾನು ಕನ್ನಡದಲ್ಲಿಯೇ ಬಿಜಿನೆಸ್ ಮಾಡಿ ತೋರಿಸುತ್ತೇನೆ ಮತ್ತು ತನ್ನ ಕಂಪನಿಯನ್ನು ಇನ್ನೂ ಎತ್ತರಕ್ಕೆ ಬೆಳೆಸುತ್ತೇನೆ ಎಂದು ಸವಾಲು ಹಾಕುವ ಹರ್ಷನಿಗೆ ನನ್ನ ಕಡೆಯಿಂದ ಭಲೇ ಭಲೇ...

—ರಮಾನಂದ ಶರ್ಮಾ, ನವದೆಹಲಿ

## ಆಟೊ ಹುಡುಕಾಟ! ನಗರದ ಪಡಿಪಾಟಲಿಗೆ ಕನ್ನಡಿ

'ಝೀ ಕನ್ನಡ' ವಾಹಿನಿಯ 'ಶ್ರೀರಸ್ತು ಶುಭಮಸ್ತು' ಧಾರಾವಾಹಿಯಲ್ಲಿ ಮಾಧವ್ ಮತ್ತು ತುಳಸಿ ಆಟೊಗೋಸ್ಕರ ಪಡುವ ಪಾಡು ಹೇಳತೀರದು. ಸಿಕ್ಕರೂ ಅವರ ಗಮ್ಯ ಸ್ಥಳಕ್ಕೆ ಹೋಗಲು ಆಟೊ ಚಾಲಕರು ನಿರಾಕರಿಸುತ್ತಾರೆ. ಈ ಸನ್ನಿವೇಶ ಧಾರಾವಾಹಿಗೋಸ್ಕರ ಚಿತ್ರಿತವಾಗಿದ್ದರೂ, ಬೆಂಗಳೂರು ಮಹಾನಗರದಲ್ಲಿ ಸಾಮಾನ್ಯ ಜನರು ಪ್ರತಿದಿನ ಅನುಭವಿಸುವ ಪಡಿಪಾಟಲು ನೋಡಿದ ಅನುಭವವಾಯಿತು.

—ಶಾಂತ ಕುಮಾರ್, ಸರ್ಜಾಪುರ